## ನಿಮ್ಮೊಡನೆ

# ಮೊದಲ ಮಳೆಯ ಪಾಠ ತಲೆಗಿಳಿಯಲಿ

**ಬೊಗಸೆಯಲ್ಲಿ ಕೆಲವರು ಆಲಿಕಲ್ಲುಗಳ ರಾಶಿ ತುಂಬಿಕೊಂಡು ಶ್ವೇತನಗೆ ಬೀರಿದರೆ, ಬೌರಿಂಗ್ ಆಸ್ಪತ್ರೆಯ ಗೋಡೆ ದಿಢೀರನೆ ಕುಸಿದ ಕಾರಣ ಬೀದಿಬದಿಯ ಏಳು ವ್ಯಾಪಾರಿಗಳು ಜೀವವನ್ನೇ ಕಳೆದುಕೊಂಡರು. ಆಲಿಕಲ್ಲಿನ ತಂಪು ಕೆಲವರಿಗೆ ಪ್ರಕೃತಿಯ ಮಾಯೆ. ಕಾಂಪೌಂಡ್ ಕುಸಿದ ಸ್ಥಳದಲ್ಲಿ ಕಂಡದ್ದು ಸೂತಕದ ಛಾಯೆ. ಏಪ್ರಿಲ್ 29ರ ಮಹಾಮಳೆಯ ಎರಡು ವೈರುಧ್ಯಗಳಿವು.**



ವಿಜಯ

ಬೆಂಗಳೂರು ಮಹಾನಗರವು ಮಳೆಯ ಕಾರಣಕ್ಕೆ ಬಿಕ್ಕುವುದು ಹಳೆಯ ವಿಷಯವೇನೂ ಅಲ್ಲ. ಆದರೆ, ಆ ಬಿಕ್ಕುವಿಕೆಗೆ ಶಾಶ್ವತ ಪರಿಹಾರವನ್ನು ಯಾವ ಆಡಳಿತವೂ ಕಂಡುಕೊಳ್ಳಲು ಆಗಿಲ್ಲವೆನ್ನುವುದು ದುರಂತ. ಈ ವರ್ಷ ಬೇಸಿಗೆ ಧಗೆಯ ಹಾಸು ವ್ಯಾಪಕವಾಗಿತ್ತು. ಬಸಿಯುವ ಬೆವರಿನ ಮಜ್ಜನ ಮಾಡಿದವರು 'ಉಸ್ಸಪ್ಪಾ' ಎನ್ನುತ್ತಿರುವಾಗಲೇ ಜೀವಕಳೆ ತರುವಂತೆ ಮಳೆ ಧಾರಾಕಾರ ಸುರಿಯಿತು. ಸಂಭ್ರಮದ ಕೆಲವೇ ಗಂಟೆಗಳಲ್ಲಿ ಸೂತಕದ ಸುದ್ದಿಗಳೂ ಬರಲಾರಂಭಿಸಿದವು.

ಕಳೆದ ವರ್ಷ ಮಾರ್ಚ್ ತಿಂಗಳಲ್ಲೇ ಮಹಾನಗರವು 11.8 ಎಂ.ಎಂ.ನಷ್ಟು ಮೊದಲ ಮಳೆಗೆ ಸಾಕ್ಷಿಯಾಗಿತ್ತು. ಆ ಸಾಧಾರಣ ಮಳೆಯ ಪರಿಣಾಮದಿಂದಾಗಿಯೇ ಮೂರು ವರ್ಷದ ಬಾಲಕಿ ಜೀವತೆತ್ತಿದ್ದಳು. ಈಗ ಬೌರಿಂಗ್ ಆಸ್ಪತ್ರೆಯ ದುರಂತದಲ್ಲಿ ಅಸುನೀಗಿದವರೂ ಸೇರಿ ಮೊದಲ ಮಳೆಯ ಪರಿಣಾಮದಿಂದಾಗಿ ಹತ್ತು ಮಂದಿ ಮೃತಪಟ್ಟಿದ್ದಾರೆ. ಹೀಗೆಯೇ ವರ್ಷದಿಂದ ವರ್ಷಕ್ಕೆ ಮಳೆ ಪರಿಣಾಮಗಳಿಂದಾಗಿ ಪ್ರಾಣ ಕಳೆದುಕೊಳ್ಳುತ್ತಿರುವವರ ಲೆಕ್ಕ ಮಾಡಲಾರಂಭಿಸಿದರೆ, 'ಜೀವ ಬಲು ಅಗ್ಗ' ಎಂಬ ವಾಕ್ಯ ತಲೆಯನ್ನು ಕೊರೆಯದೇ ಇರದು. ಇದು ಆಡಳಿತದ ಚುಕ್ಕಾಣಿ ಹಿಡಿದವರನ್ನೂ ಇನ್ನಿಲ್ಲದಂತೆ ಅಲ್ಲಾಡಿಸಬೇಕಿದೆ.

ಬೆಂಗಳೂರಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ಕೊನೆ ಮೊದಲಿಲ್ಲದಂತೆ ನಡೆಯುತ್ತಲೇ ಇವೆ. ಉರುಳಿದ ಮರಗಳು, ಬತ್ತಿದ ಕೆರೆಗಳು, ಅವುಗಳ ಜಾಗದಲ್ಲಿ ಆಕಾಶಕ್ಕೆ ಮುಖಮಾಡಿ ನಿಂತ ಇಮಾರತ್ತುಗಳು, ಡಾಂಬರು ಹಾಸಿನ ಮೇಲೆ ಹಾಕಿರುವ ದಪ್ಪನೆಯ ವೈಟ್ ಟಾಪಿಂಗ್–ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದರೆ ಪರಿಸರದ ಮೇಲೆ ಆಗುತ್ತಿರುವ ಮಾನವ ಹಸ್ತಕ್ಷೇಪದ ಪ್ರಮಾಣ ಅಂದಾಜಿಗೆ ನಿಲುಕೀತು. ಹವಾಮಾನ ಇಲಾಖೆಯ ಮಾಹಿತಿಯ ಪ್ರಕಾರ ಏಪ್ರಿಲ್ 29ರಂದು ಸುರಿದದ್ದು 111 ಮಿ.ಮೀ.ನಷ್ಟು ಮಳೆ. ಇದರಿಂದಲೇ ಪರಿಣಾಮ ಇಷ್ಟು ಕಾಡುವಂತಿದೆ ಎಂದರೆ, ಮುಂಗಾರು ಮಾರುತಗಳು ದಟ್ಟೈಸಿದ ನಂತರ ಏನೆಲ್ಲ ಆಗಬಹುದು ಎಂಬ ಆತಂಕ ಸಹಜವಾಗಿಯೇ ನಾಗರಿಕರಲ್ಲಿ ಮೂಡುತ್ತದೆ.

ಈ ವರ್ಷ ರಾಜ್ಯದ ಹಲವು ಪ್ರದೇಶಗಳು ಆಲಿಕಲ್ಲು ಮಳೆಗೆ ಸಾಕ್ಷಿಯಾಗಿವೆ. ಶಿವಮೊಗ್ಗ, ಧಾರವಾಡ, ಬಳ್ಳಾರಿ, ಕೊಪ್ಪಳ ಹಾಗೂ ಮಲೆನಾಡಿನ ಭಾಗಗಳಲ್ಲಿ ಆಲಿಕಲ್ಲು ಮಳೆ ಕಳೆದ ಎರಡು ತಿಂಗಳ ಅವಧಿಯಲ್ಲಿ ಸುರಿಯಿತು. ಹಿಮಾಲಯದ ಶ್ವೇತವೈಭವ ನೆನಪಿಸುವಷ್ಟು ಆಲಿಕಲ್ಲುಗಳ ಪದರ ಮೂಡಿದ ಉದಾಹರಣೆಗಳೂ ಸಿಕ್ಕವೆನ್ನಿ. ಛಾಯಾಚಿತ್ರಗಳಲ್ಲಿ ಕಣ್ಣುಕೋರೈಸುವಂತೆ ಕಾಣುವ ಆಲಿಕಲ್ಲು ಮಳೆಯು ರೈತನಿಗೆ ಯಾತನಾಮಯ ಎನ್ನುವ ಸತ್ಯವೇ ಎಷ್ಟೋ ಜನರಿಗೆ ತಿಳಿದಿಲ್ಲ.

ಭತ್ತ, ಮಾವು, ದ್ರಾಕ್ಷಿ, ಟೊಮ್ಯಾಟೊ, ಬಾಳೆ, ಸಾಸಿವೆ ಹೀಗೆ ರಾಜ್ಯದ ಪ್ರಮುಖ ಬೆಳೆಗಳು ಮೊದಲ ಆಲಿಕಲ್ಲು ಮಳೆಯಿಂದಾಗಿ ಹಾನಿಗೊಳಗಾಗಿವೆ. ತೀವ್ರವಾದ ಗಾಳಿ–ಮಳೆಯಿಂದಾಗಿ ಶಿವಮೊಗ್ಗ ಜಿಲ್ಲೆಯ ಅಸಂಖ್ಯ ಅಡಿಕೆ ಮರಗಳು ಉರುಳುಬಿದ್ದಿರುವ ವರ್ತಮಾನಗಳೂ ಇವೆ. ಈಗ ಮಹಾನಗರದಲ್ಲಿ ಅಂತಹುದೇ ಆಲಿಕಲ್ಲು ಮಳೆ ನೋಡಿ ಜನರು ಪುಳಕಿತರಾಗಿರುವುದು ಸಹಜವೇ. ಕೃಷಿ ಆಧಾರಿತ ಅರ್ಥ ವ್ಯವಸ್ಥೆಗೆ ಇದು ದೊಡ್ಡ ಪೆಟ್ಟು ಕೊಡುವ ಸಂಕೇತ ಎನ್ನುವ ಅರಿವೂ ಸಂಭ್ರಮಿಸುವ ನಮಗೆಲ್ಲ ಇರಬೇಕು.

ಮಹಾನಗರದಲ್ಲಿ ಮೊದಲ ಮಳೆ ಉಂಟುಮಾಡುವ ವ್ಯತಿರಿಕ್ತ ಪರಿಣಾಮಗಳಲ್ಲಿ ಬಹುಪಾಲು ಮಾನವನೇ ಸೃಷ್ಟಿಸಿಕೊಂಡಿರುವಂಥವು. ಅಸಮರ್ಪಕ ಕಸ ವಿಲೇವಾರಿ, ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕಸಗಳನ್ನು ಬಿಸಾಡುವುದು, ಹೋಟೆಲ್ ತ್ಯಾಜ್ಯಗಳ ಅವೈಜ್ಞಾನಿಕ ನಿರ್ವಹಣೆ, ಆಹಾರ ಪದಾರ್ಥಗಳನ್ನು ಎಗ್ಗಿಲ್ಲದೆ ಮುಸುರೆಗೆ ಹಾಕುವ ಪರಿಪಾಟ... ಇವೆಲ್ಲವನ್ನೂ ಜನರೇ ಮಹಾನಗರದ ಪರಿಸರಕ್ಕೆ ನೀಡುತ್ತಿದ್ದಾರೆ. ಅದರ ಫಲವೇ ಮಳೆಯ ವ್ಯತಿರಿಕ್ತ ಪರಿಣಾಮಗಳು.

ಮಳೆಗಾಲ ಬರುವ ಮೊದಲೇ ಮುಂಜಾಗ್ರತಾ ಕ್ರಮವಾಗಿ ಕೆಲವು ಸಾಮಾನ್ಯವಾದ ಸಮಸ್ಯೆಗಳನ್ನು ಆಡಳಿತ ವ್ಯವಸ್ಥೆಯು ಇಲ್ಲವಾಗಿಸಬೇಕು. ರಸ್ತೆಗಳಿಗೆ ವಿಪರೀತ ಎನ್ನುವಷ್ಟು ಚಾಚಿಕೊಂಡ ಮರದ ಟೊಂಗೆಗಳನ್ನು ಸವರುವುದು, ವಿದ್ಯುತ್ ತಂತಿಗಳು ಜೋತುಬಿದ್ದಿಲ್ಲವಷ್ಟೇ ಎಂದು ನಿಗಾ ಮಾಡುವುದು, ದೊಡ್ಡ ಮೋರಿಗಳಿಗೆ ನೀರು ಹರಿಸುವ ಪೊಟರೆಗಳೆಲ್ಲ ಮುಚ್ಚಿಕೊಂಡಿಲ್ಲವಷ್ಟೆ ಎನ್ನುವುದನ್ನು ಖಾತರಿಪಡಿಸಿಕೊಳ್ಳುವುದು, ಹೆದ್ದಾರಿ–ವೃತ್ತಗಳ ಬದಿಗಳಲ್ಲಿ ಬಿದ್ದಿರುವ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ವಿಲೇವಾರಿ ಮಾಡುವುದು... ಇವೆಲ್ಲವೂ ಅಗತ್ಯವಾಗಿ ಆಗಲೇಬೇಕಾದಂಥವು. ಪ್ರತಿ ವರ್ಷವೂ ಇಂತಹ ಸರಳ ಕಾರ್ಯಗಳನ್ನೇ ಎಷ್ಟೋ ಕಡೆ ನಿರ್ವಹಿಸಿರುವುದಿಲ್ಲ. ತಮ್ಮ ಮನೆಯ ಎದುರಿನ ಮೋರಿಗಳಲ್ಲಿ ನೀರು ಸಮರ್ಪಕವಾಗಿ ಹರಿದು ಸಾಗುತ್ತಿದೆ ಎನ್ನುವುದನ್ನು ಗಮನಿಸಿಕೊಳ್ಳುವ ಹೊಣೆ ನಗರ ನಾಗರಿಕರದ್ದೂ ಆಗಿದೆ. ಇಂತಹ ಮೂಲ ಸಂಗತಿಗಳಿಗೆ ಬೆನ್ನು ಮಾಡಿ, ಹೊಸ ಆರ್ಥಿಕತೆಯ ಹಿಂದೆ ಓಡುತ್ತಿರುವ ಮಂದಿಗೆ ಮಹಾಮಳೆಯು ತಂಪನ್ನೆರೆಯುತ್ತಲೇ ಜೀವನ ಪಾಠವನ್ನೂ ಕಲಿಸುತ್ತಿದೆಯೇನೋ ಎನಿಸುತ್ತದೆ. ಆಡಳಿತವರ್ಗ ಹಾಗೂ ನಾಗರಿಕರು ಆ ಪಾಠಗಳನ್ನು ಗಮನಿಸಿ, ತಿದ್ದಿಕೊಂಡು ನಡೆಯಬೇಕಷ್ಟೆ.

**ವಿಶಾಖ ಎನ್.**